ಧಾರವಾಡದಲ್ಲಿ ಕುಸ್ತಿ ಮಂದಿರ ನಿರ್ಮಾಣ

2202 (2377) ಶ್ರೀ ಬೆಲ್ಲದ್ ಚಂದ್ರಕಾಂತ್ ಗುರಪ್ಪ (ಧಾರವಾಡ): ಮಾನ್ಯ ಯುವಜನ ಸೇವಾ ಹಾಗೂ ಕ್ರೀಡಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕರ್ನಾಟಕದಲ್ಲಿ ಕುಸ್ತಿ ಪೈಲವಾನರಿಗೆ ಕುಸ್ತಿಥೇಟರ್ ಯಾವ ಜಿಲ್ಲೆ, ತಾಲ್ಲೂಕುಗಳಲ್ಲಿ ನಿರ್ಮಿಸಲಾಗಿದೆ;

ಧಾರವಾಡದಲ್ಲಿ ಈ ಕುಸ್ತಿ ಮಂದಿರ ನಿರ್ಮಿಸಲು ಯೋಜನೆ ಸರ್ಕಾರದ ಮುಂದಿದೆಯೇ; (ವಿವರಿಸಿ);

ಆ) ಧಾರವಾಡದಲ್ಲಿ ಮೊದಲಿನಿಂದಲೂ ಕುಸ್ತಿಗಳಿಗಾಗಿ ಪ್ರೋತ್ಸಾಹ ನೀಡುತ್ತಾ ಬಂದಿರುವುದು ಹಾಗೂ ವ್ಯಯಾಮ ಶಾಲೆ ತರಬೇತಿ ಸಂಸ್ಥೆಗಳು ಇರುವುದು ಸರ್ಕಾರ ಗಮನಿಸಿರುವುದೇ;

ಇ) ಈ ನಿಟ್ಟಿನಲ್ಲಿ ಇಂತಹ ರಾಜ್ಯ ಹಾಗೂ ರಾಷ್ಟ್ರಮಟ್ಟದ ಕ್ರೀಡಾಪಟುಗಳಿಗೆ ಮಾಶಾಸನ ನೀಡಲು ಯಾವ ಕ್ರಮ ಕೈಗೊಂಡಿದೆ;

ಈ) ಹಾಲಿ ಇರುವ ಮಾಶಾಸನವನ್ನು ಹೆಚ್ಚಿಸಲು ಪ್ರಸ್ತಾವ ಸರ್ಕಾರದ ಮುಂದಿದೆಯೆ (ವಿವರಿಸಿ)?

ಶ್ರೀ ಎಸ್.ಎಸ್. ಮಲ್ಲಿಕಾರ್ಜುನ್ (ಯುವಜನ ಸೇವಾ ಹಾಗೂ ಕ್ರೀಡಾ ರಾಜ್ಯ ಸಚಿವರು):

ಅ) 1) ಕುಸ್ತಿ ಅಖಾಡ, ಬಾಗಲಕೋಟೆ
2) ಕುಸ್ತಿ ಅಖಾಡ, ಹಳಿಯಾಳ, ಉತ್ತರ ಕನ್ನಡ ಜಿಲ್ಲೆ
3) ಒಳಾಂಗಣ ಕ್ರೀಡಾಂಗಣದ ಕುಸ್ತಿ ಅಖಾಡ, ದಾವಣಗೆರೆ ಜಿಲ್ಲೆ
4) ಸಾಹುಕಾರ ಚನ್ನಯ್ಯ ಕುಸ್ತಿ ಅಖಾಡ, ಮೈಸೂರು.

ಇಲ್ಲ.

ಆ) ಹೌದು.

ಇ) ಆರ್ಥಿಕವಾಗಿ ಕಷ್ಟ ಪರಿಸ್ಥಿತಿಯಲ್ಲಿರುವ 50 ವರ್ಷ ಮೀರಿದ ಕ್ರೀಡಾಪಟುಗಳಿಗೆ ಈ ಕೆಳಗಿನಂತೆ ಮಾಸಾಶನ ನೀಡಲಾಗುತ್ತಿದೆ:

ರಾಜ್ಯ ಮಟ್ಟ ರೂ. 300-00
ರಾಷ್ಟ್ರ ಮಟ್ಟ ರೂ. 400-00
ಅಂತರಾಷ್ಟ್ರ ಮಟ್ಟ ರೂ. 600-00

ಈ) ಪರಿಶೀಲಿಸಲಾಗುತ್ತಿದೆ.

ಖಾಸಗೀ ಆಯುರ್ವೇದ ಔಷಧ ಕಂಪನಿಗಳಿಗೆ ಕಂದಾಯ / ಅರಣ್ಯ ಭೂಮಿ ನೀಡುವ ಬಗ್ಗೆ

2203 (2497) ಶ್ರೀ ಬೆಲ್ಲದ್ ಚಂದ್ರಕಾಂತ್ ಗುರಪ್ಪ (ಧಾರವಾಡ): ಮಾನ್ಯ ಅರಣ್ಯ ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಅನೇಕ ಆಯುರ್ವೇದಿಯ ಔಷಧಿ ಕಂಪನಿಗಳು ತಮಗೆ ಬೇಕಾಗುವ ಗಿಡ ಮೂಲಿಕೆಗಳನ್ನು ಅವರುಗಳೇ ಬೆಳೆಸುತ್ತಿರುವರೆ; (ವಿವರವಾದ ಮಾಹಿತಿ ನೀಡುವುದು);

ಅ) ರಾಜ್ಯದ ಹೊರಗಿನ ಆಯುರ್ವೇದಿಯ ಔಷಧಿಗಳ ಉತ್ಪಾದನೆಯ ಘಟಕಗಳಿಗೆ ಬೇಕಾಗುವ ಅಥವಾ ರಾಜ್ಯದಿಂದ ಸಂಗ್ರಹಿಸುವ ಗಿಡ ಮೂಲಿಕೆಗಳ ವಿವರ ಇದೆಯೇ;

ಇ) ರಾಜ್ಯದ ಆದಾಯ ಹೆಚ್ಚಿಸಲು ಮತ್ತು ಭೂಸಂಪತ್ತಿನ ಪ್ರಯೋಜನ ಪಡೆಯಲು ಖಾಸಗೀ ಕಂಪನಿಗಳಿಗೆ ಕಂದಾಯ / ಅರಣ್ಯ ಭೂಮಿಗಳನ್ನು ನೀಡಲಾಗುವುದೇ?

ಶ್ರೀ ಕೆ.ಹೆಚ್. ರಂಗನಾಥ್ (ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು):

ಅ) ರಾಜ್ಯದಲ್ಲಿರುವ ಆಯುರ್ವೇದಿಯ ಔಷಧಿ ಕಂಪನಿಗಳು ಅರಣ್ಯ ಇಲಾಖೆ ವ್ಯಾಪ್ತಿಗೆ ಬರುವುದಿಲ್ಲ. ಆದುದರಿಂದ ಅವರಿಗೆ ಬೇಕಾಗುವ ಗಿಡ ಮೂಲಿಕೆಗಳನ್ನು ಅವರೇ ಬೆಳೆಸುತ್ತಿರುವ ಬಗ್ಗೆ ಅರಣ್ಯ ಇಲಾಖೆಗೆ ಮಾಹಿತಿಯಿರುವುದಿಲ್ಲ.

ಆ) ರಾಜ್ಯದ ಹೊರಗಿನ ಆಯುರ್ವೇದಿಯ ಔಷಧಿಗಳ ಉತ್ಪಾದನೆಯ ಘಟಕಗಳು ಅರಣ್ಯ ಇಲಾಖೆ ವ್ಯಾಪ್ತಿಗೆ ಬರುವುದಿಲ್ಲ. ಆದುದರಿಂದ, ಅವರು ರಾಜ್ಯದಿಂದ ಸಂಗ್ರಹಿಸುವ ಗಿಡಮೂಲಿಕೆಗಳ ವಿವರ ಲಭ್ಯವಿರುವುದಿಲ್ಲ.

ಇ) ಇಂತಹ ಯಾವುದೇ ಯೋಜನೆ ಅರಣ್ಯ ಇಲಾಖೆಯಲ್ಲಿ ಜಾರಿಯಲ್ಲಿರುವುದಿಲ್ಲ.

ರಾಜ್ಯದಲ್ಲಿ ಔಷಧಿ ಗಿಡಮೂಲಿಕೆಗಳ ಅಭಿವೃದ್ಧಿ

2205 (2500) ಶ್ರೀ ಬಿಲ್ಲದ್ ಚಂದ್ರಕಾಂತ್ ಗುರಪ್ಪ (ಧಾರವಾಡ): ಮಾನ್ಯ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದ ಅರಣ್ಯದಲ್ಲಿ ಸಿಗುವ ಮಹತ್ವದ ಔಷಧೀಯ ಗಿಡ ಮೂಲಿಕೆಗಳು ಯಾವುವು; ಹಾಗೂ ಯಾವ ಪ್ರದೇಶದಲ್ಲಿ ಬೆಳೆದಿವೆ; (ವಿವರ ನೀಡುವುದು)

ಆ) ಗಿಡಮೂಲಿಕೆಗಳ ವನಗಳು ಯಾವ ಯಾವ ಸ್ಥಳದಲ್ಲಿ ಬೆಳೆಸಿದೆ; ಅವುಗಳಿಂದ ಆಗಿರುವ ಪ್ರಯೋಜನ ಏನು; ವನಗಳ ಅಭಿವೃದ್ಧಿಯ ಉದ್ದೇಶವೇನಾದರೂ ಇದೆಯೇ;

ಇ) ರಾಜ್ಯದ ಗಿಡಮೂಲಿಕೆಗಳಿಗೆ ಬಹಳ ಬೇಡಿಕೆ ಇರುವುದರಿಂದ ಇದರ ಅಭಿವೃದ್ಧಿಗೆ ಸರ್ಕಾರ ಕೈಗೊಂಡಿರುವ ಕ್ರಮ ಏನು? (ವಿವರ ನೀಡುವುದು)?

ಶ್ರೀ ಕೆ.ಹೆಚ್. ರಂಗನಾಥ್ (ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು):

ಅ) ರಾಜ್ಯ ಅರಣ್ಯದಲ್ಲಿ ಸಿಗುವ ಮಹತ್ವದ ಔಷಧೀಯ ಗಿಡಮೂಲಿಕೆಗಳೆಂದರೆ ಮಧುನಾಶಿನಿ, ನೆಲ್ಲಿ, ಅಶ್ವಗಂಧ, ಲೋಳೆಸರ, ಇಪ್ಪಲಿ, ನೆಲಬೇವು, ನೆಲನೆಲ್ಲಿ, ಶತಾವರಿ, ಬಜೆ, ಆಡುಸೋಗೆ, ಸದಾಪುಷ್ಪ, ಪಚೋಲಿ, ಲೆಮನ್ ಗ್ರಾಸ್, ದೊಡ್ಡಪತ್ರೆ, ಅಮೃತ ಬಳ್ಳಿ, ಮಾಕಳಿ, ಒಂದೆಲಗ (ಬ್ರಾಹ್ಮಿ) ಬನ್ನಿ, ಪಾರಿಜಾತ, ಗೋರಂಟಿ, ಕಾಡು ಬದನೆ, ಅಮಟೆ, ಅತ್ತಿ, ತುಂಬೆ, ತುಳಸಿ, ಆಲ, ಅಳಲೆ, ಆಡುಸೋಗೆ, ಉತ್ತರಾಣಿ, ಎಕ್ಕ, ಗುಲಗಂಜಿ, ಚಿತ್ರಮೂಲ, ದಾಸವಾಳ, ದರ್ಬೆ, ನಾಗಸಂಪಿಗೆ, ದಾಲ್ಚಿನ್ನಿ, ನೇರಳೆ, ಪಗಡೆ, ಬಸರಿ, ಬಾಗೆ, ಮದುನಾಶಿನಿ, ಶಿವನೆ, ಶ್ರೀಗಂಧ, ಸರ್ಪಗಂಧ, ಬಿಲ್ವಪತ್ರೆ, ಮದರಂಗಿ, ಬೇವು ಇತ್ಯಾದಿ.

ಹೆಚ್ಚಿನ ಔಷಧಿಯ ಸಸ್ಯಗಳು ಪಶ್ಚಿಮ ಘಟ್ಟ ಅರಣ್ಯ ಪ್ರದೇಶದಲ್ಲಿ ಕಂಡುಬರುತ್ತದೆ. ಉಳಿದಂತೆ ಅನೇಕ ಜಾತಿಯ ಔಷಧೀಯ ಸಸ್ಯಗಳು ರಾಜ್ಯದ ಪೂರ್ವ ಭಾಗದ ಅರಣ್ಯಗಳಲ್ಲೂ ಸಹಾ ಕಂಡು ಬರುತ್ತವೆ.

ಆ) ಅರಣ್ಯ ಇಲಾಖೆಯಲ್ಲಿ ಈ ಕೆಳಕಂಡ ಸ್ಥಳಗಳಲ್ಲಿ ಗಿಡಮೂಲಿಕೆಗಳ ವನಗಳನ್ನು ಬೆಳೆಸಲಾಗಿದೆ:-